ಚಾಸಾ–01 ಪ್ರಾಸಾ–01

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ**

**ಸಿ ಸಿ – 1612/2025**

ದಿನಾಂಕಃ 03.08.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಮಹಮದ್ ಉಸ್ಮಾನ್ |
| ತಂದೆಯ ಹೆಸರು | : | ಮಹಮದ್ ಇಸ್ಮಾಯಿಲ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಕ್ಲೀನರ್ ಕೆಲಸ |
| ವಾಸಸ್ಥಳ | : | ಮುದುಗಲ್ |

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ**

ಚಾ.ಸಾ 13 ರಿಂದ 27 ರವರ ಪರಿಚಯ ನನಗೆ ಇರುವುದಿಲ್ಲ. ಆರೋಪಿಯ ಪರಿಚಯ ನನಗೆ ಇರುತ್ತದೆ. ಹೀಗ್ಗೆ 1 ವರ್ಷದ ಹಿಂದೆ ಖಾನಹೊಸಹಳ್ಳಿ ಹತ್ತಿರ ಎನ್.ಹೆಚ್–50 ರಸ್ತೆಯಲ್ಲಿ ಸುಗಮ ಖಾಸಗಿ ಬಸ್ ಮತ್ತು ಲಾರಿ ನಡುವೆ ಅಪಘಾತವಾಗಿರುತ್ತದೆ. ನಾನು ಸದರಿ ಬಸ್ ನಲ್ಲಿ ಬಲಭಾಗದ ಮೇಲಿನ ಸೀಟ್ ನಲ್ಲಿ ಮಲಗಿದ್ದೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತದ ಶಬ್ದ ಬಂದ ನಂತರ ನಾನು ಎದ್ದು ನೋಡಿರುತ್ತೇನೆ. ನನ್ನ ಕಾಲು ಬೆರಳುಗಳಿಗೆ ಪೆಟ್ಟಾಗಿರುತ್ತದೆ. ಬಸ್ ನ ಎಡಭಾಗ, ಲಾರಿಯ ಬಲಭಾಗ ಜಖಂ ಆಗಿರುತ್ತದೆ. ಬಸ್ ನಲ್ಲಿ ಇದ್ದವರಿಗೆ ಗಾಯಗಳು ಆಗಿದ್ದವು. ಆ ನಂತರ ಗಾಯಾಳುಗಳನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ನನಗೆ ನ್ಯಾಯಾಲಯದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು ಅದು ದೂರು ಆಗಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದೂರನ್ನು ನಿ.ಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 1–ಎ ಎಂದು ಗುರುತಿಸಲಾಯಿತು.

ಅಪಘಾತವಾದ ಮಾರನೇ ದಿನ ಕೃತ್ಯಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 12–00 ರಿಂದ 1–00 ಗಂಟೆಯವರೆಗೆ ಜರುಗಿಸಿರುತ್ತಾರೆ. ಆ ಕಾಲಕ್ಕೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ.

ನನಗೆ ನ್ಯಾಯಾಲಯದಲ್ಲಿ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ಕೃತ್ಯಸ್ಥಳ ಪಂಚನಾಮೆಯಾಗಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಕೃತ್ಯಸ್ಥಳ ಪಂಚನಾಮೆಯನ್ನು ನಿ.ಪಿ 2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 2–ಎ ಎಂದು ಗುರುತಿಸಲಾಯಿತು. ನನಗೆ ನ್ಯಾಯಾಲಯದಲ್ಲಿ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ಕಚ್ಚಾ ನಕಾಶೆಯಾಗಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಕಚ್ಚಾ ನಕಾಶೆಯನ್ನು ನಿ.ಪಿ 3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 3–ಎ ಎಂದು ಗುರುತಿಸಲಾಯಿತು.

ಅಪಘಾತವಾದ 2–3 ದಿನಗಳ ನಂತರ ಮಧ್ಯಾಹ್ನ 3–00 ರಿಂದ 4–00 ಗಂಟೆಗೆ ವಾಹನ ಜಪ್ತು ಪಂಚನಾಮೆಯನ್ನು ಜರುಗಿಸಿರುತ್ತಾರೆ.

ನನಗೆ ನ್ಯಾಯಾಲಯದಲ್ಲಿ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ಲಾರಿ ಮತ್ತು ಬಸ್ ಜಪ್ತು ಪಂಚನಾಮೆಯಾಗಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಲಾರಿ ಮತ್ತು ಬಸ್ ಜಪ್ತು ಪಂಚನಾಮೆಯನ್ನು ನಿ.ಪಿ 4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 4–ಎ ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 5 ಮತ್ತು 6 ಎಂದು ಗುರುತಿಸಲಾಯಿತು.

ನಿ.ಪಿ 1 ರಿಂದ 4 ಕ್ಕೆ ನನ್ನ ಸಹಿಯನ್ನು ಪೊಲೀಸರು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿ.ಪಿ 1 ರಿಂದ 4 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಸ.ಸ.ಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲಾಯಿತು ಹಾಗೂ ಸ.ಸ.ಅ ರವರ ಕೋರಿಕೆಯಂತೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿಃ 16.09.2025 ರಂದು ಬೆಳಗಿನಜಾವ 1–25 ಗಂಟೆಗೆ ಸುಗಮ ಬಸ್ ಮತ್ತು ಲಾರಿ ನಡುವೆ ಅಪಘಾತವಾಗಿತ್ತು ಎಂದರೆ ಸರಿ. ಬಸ್ ಚಾಲಕ ಏಕಾಏಕಿ ಬಸ್ ನ್ನು ಎಡಕ್ಕೆ ತೆಗೆದುಕೊಂಡಾಗ ಮುಂದೆ ಹೋಗುತ್ತಿದ್ದ ಲಾರಿಯ ಹಿಂದಿನ ಬಲಭಾಗಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ಪ್ರಯಾಣಿಕರು ಕೂಗಾಡುತ್ತಾ, ಚೀರಾಡುತ್ತಾ ಇದ್ದರು ಎಂದರೆ ಸರಿಯಲ್ಲ. ಗಾಯಾಳುಗಳನ್ನು ಆಂಬುಲೆನ್ಸ್

ನಲ್ಲಿ ಕೂಡ್ಲಿಗಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗದೇ ಇರುವ ಕಾರಣ ನಾನು ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿ. ಸುಗಮ ಬಸ್ ನಂಃ ಕೆಎ–01/ಎ.ಎಲ್–8916 ಆಗಿರುತ್ತದೆ ಎಂದರೆ ಸರಿ. ಚಾ.ಸಾ 13 ರಿಂದ 21 ರವರಿಗೆ ಗಾಯಗಳು ಆಗಿರುತ್ತವೆಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಲಾರಿ ನೊಂದಣಿ ಸಂಖ್ಯೆಃ ಆರ್.ಜೆ–19/ಜಿ.ಹೆಚ್–2392 ಆಗಿರುತ್ತದೆ, ಅದರ ಚಾಲಕ ರಾಮಲಾಲ್ ಲೋಲ್ ಎಂದರೆ ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಬಸ್ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯಿಂದ ಸದರಿ ಅಪಘಾತವಾಗಿದೆ ಎಂದರೆ ಸರಿಯಲ್ಲ.

ಅದೇ ದಿನ ಮಧ್ಯಾಹ್ನ 12–15 ರಿಂದ 1–15 ಗಂಟೆಯವರೆಗೆ ನಾನು ಅಪಘಾತ ಸ್ಥಳವನ್ನು ತೋರಿಸಿದ ಮೇರೆಗೆ ಚಾ.ಸಾ 11 ಮತ್ತು 12 ರವರ ಸಮಕ್ಷಮ ಕೃತ್ಯಸ್ಥಳ ಪಂಚನಾಮೆಯನ್ನು ಜರುಗಿಸಿ ಕಚ್ಚಾ ನಕಾಶೆ ತಯಾರಿಸಿ ಭಾವಚಿತ್ರಗಳನ್ನು ತೆಗೆಸಿರುತ್ತಾರೆ ಎಂದರೆ ಸರಿ. ಅದೇ ದಿನ ಮಧ್ಯಾಹ್ನ 1–30 ರಿಂದ 2–30 ಗಂಟೆಗೆ ಬಸ್ ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ., ಕೂಡ್ಲಿಗಿ.**